**ದಿನಾಂಕ ಃ 24.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲು ಃ- ಅರ್ಜಿದಾರರ ಪರ ಶ್ರೀ. ಎಸ್ ಜಿಪಿ . ವಕೀಲರಿಂದ ಃ-**

ಮುನಿಗಂಗಮ್ಮ ಮತ್ತು ಚನ್ನಮ್ಮ ರವರು ನಿಮ್ಮ ವಿರುದ್ದ ಭಾಗಕ್ಕಾಗಿ ಕೇಸನ್ನು ಹಾಕಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅರ್ಜಿದಾರರು ಯಾವ ಕಾರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದು ನಿಮಗೆ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುನಿಗಂಗಮ್ಮ ಮತ್ತು ಚನ್ನಮ್ಮ ಎಷ್ಟು ಆಸ್ತಿಗಳ ಮೇಲೆ ಕೇಸನ್ನು ಹಾಕಿದ್ದರು ಎಂದು ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರು ಭಾಗಾಂಶ ಕೋರಿ ಕೇಸನ್ನು ಹಾಕಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಮರ ಕಡಿಯಬಾರದು ಎಂದು ಆದೇಶ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾಸ್ವತ್ತುಗಳು ಎಷ್ಟು ಇದ್ದವು ಎಂದರೆ ಸಾಕ್ಷಿ 4 ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಸರ್ವೆ ನಂ.36/4ರ ಆಸ್ತಿ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ಹೇಳಿ ಬರೆಸಿದ್ದು ಯಾರು ಎಂದರೆ ಸಾಕ್ಷಿ ನಾನೆ ಎಂದು ನುಡಿಯುತ್ತಾರೆ. ನೀವು 1992-93 ರಲ್ಲಿ ಸ್ವತ್ತನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿದ್ದು ಸದರಿಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ಆಸ್ತಿಯನ್ನು ಕರೀದಿ ಮಾಡಿರುವುದಿಲ್ಲ ನಿಮ್ಮ ತಂದೆಯವರ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಚನ್ನಮ್ಮ ರವರು ನಿಮ್ಮ ವಿರುದ್ದ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ದೂರನ್ನು ಮರ ಕಡಿದ ಬಗ್ಗೆ ಕೊಟ್ಟಿದ್ದು ಎಂದರೆ ಸಾಕ್ಷಿ ಅಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಯಾವುದರ ಬಗ್ಗೆ ನಿಮ್ಮ

ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಠಾಣೆಗೆ ಹೋಗಿರುವುದಿಲ್ಲವಾ ಎಂದರೆ ಸಾಕ್ಷಿ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ತಕರಾರನ್ನು ನೀವು ಹೇಳಿದ ಮಾಹಿತಿ ಮೇರೆಗೆ ಬರೆದಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಅರ್ಜಿದಾರರ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**